

ಸ್ಪರ್ಧೆಗಳಲ್ಲಿಯೂ ಬಹುಮಾನ ಪಡೆದಿದ್ದಾನೆ. ಹೀಗಾಗಿ ಮಕ್ಕಳಿಗೆ ಆಸಕ್ತಿ ಬರುವವರೆಗೆ ನಾವು ಕಾಯಬೇಕು' ಎನ್ನುತ್ತಾರೆ ಬೆಂಗಳೂರಿನ ಹೆಸರಘಟ್ಟ ಮುಖ್ಯರಸ್ತೆಯಲ್ಲಿರುವ 'ಮ್ಯೂಸಿಕ್ ಮನೆ'ಯಲ್ಲಿ ನೃತ್ಯಾಭ್ಯಾಸ ಮಾಡುತ್ತಿರುವ ಯುಕೆಜಿಯ ಮಯಾಂಕ್‌ನ ತಾಯಿ ಶ್ರೀದೇವಿ.

'ನನ್ನ ಮಗ ಈಗ ಆರನೇ ತರಗತಿ. ಮೊದಲಿನಿಂದಲೂ ಆತನಿಗೆ ವಿದ್ಯಾಭ್ಯಾಸದಲ್ಲಿ ಆಸಕ್ತಿ ಹೆಚ್ಚಿದೆ. ಗಣಿತ ಅವನಿಗೆ ಅಚ್ಚುಮೆಚ್ಚು. ಹೀಗಾಗಿ ಅಬಾಕಸ್ ತರಗತಿಗೆ ಸೇರಿಸಿದ್ದೇವೆ. ಅಷ್ಟೇ ಪ್ರೀತಿ ಬ್ಯಾಡ್ಮಿಂಟನ್ ಮೇಲೆಯೂ ಇದೆ. ಎಷ್ಟು ಬೇಕಾದರೂ ಆಡು, ಆದರೆ ವಿದ್ಯಾಭ್ಯಾಸದಲ್ಲಿ ಹಿಂದೆ ಬೀಳಬಾರದು ಎಂದಿದ್ದೇವೆ. ಹೀಗಾಗಿ ಅವನೇ ಸಮಯ ನಿಭಾಯಿಸಿಕೊಂಡು ಎಲ್ಲವನ್ನೂ ಮಾಡುತ್ತಾನೆ. ನಾನು ಹಿಂದೂಸ್ಥಾನಿ ಗಾಯಕಿ. ಅವನಿಗೆ ಸಂಗೀತದ ಬಗ್ಗೆ ಅಷ್ಟೊಂದು ಆಸಕ್ತಿ ಇದ್ದಂತಿಲ್ಲ. ನಾವೂ ಆ ಬಗ್ಗೆ ಅವನಿಗೆ ಒತ್ತಾಯಿಸಲೂ ಇಲ್ಲ' ಎನ್ನುವ ಮೈಸೂರಿನ ಶಾರದಾ ಅವರಿಗೆ ತನ್ನಂತೆಯೇ ತನ್ನ ಮಕ್ಕಳು ಆಗಬೇಕು ಎಂಬ ಹಪಹಪಿಯಿಲ್ಲ. ಅವರಿಗೆ ಆಸಕ್ತಿ ಇರುವ ಕ್ಷೇತ್ರದಲ್ಲಿಯೇ ಮುಂದುವರಿಯಲಿ ಎಂಬ ವಿವೇಕ ಇದೆ.

ಮಕ್ಕಳ ನಾಳೆಗಳನ್ನು ರೂಪಿಸುವಲ್ಲಿ ಒಬ್ಬೊಬ್ಬರದು ಒಂದೊಂದು ಅನುಭವ. ಮಕ್ಕಳ ಶ್ರೇಯಸ್ಸಿಗಾಗಿಯೇ ಜೀವನ ಸವೆಸುವ ತಂದೆತಾಯಿಗಳು, ಮಕ್ಕಳು ತಮ್ಮ ಹಕ್ಕು ಎನ್ನುವ ಮನೋಭಾವದಲ್ಲಿಯೇ ಇರುತ್ತಾರೆ. ಹಕ್ಕು ಚಲಾಯಿಸುವುದು, ತಮಗೆ ಬೇಕಾದಂತೆ ಅವರನ್ನು ಬೆಳೆಸುವುದು ಅಧಿಕಾರ ಎನ್ನುವಂತೆ ವರ್ತಿಸುತ್ತಾರೆ. ಇವುಗಳ ಮಧ್ಯೆ ಮಕ್ಕಳಿಗೆ ಸ್ವಾತಂತ್ರ್ಯ ಬೇಕು ಎನ್ನುವುದನ್ನು ಮರೆತೇ ಬಿಡುತ್ತಾರೆ. ಹೇರಿಕೆ ಹೆಚ್ಚಾದಷ್ಟು ವಿರೋಧವೂ ಹೆಚ್ಚುತ್ತದೆ, ಮಕ್ಕಳು ತಮ್ಮ ಅಸ್ಮಿತೆಯನ್ನು ಕಳೆದುಕೊಂಡುಬಿಡುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ ಮಕ್ಕಳು ಇವುಗಳಿಂದ ಬೇಸತ್ತು ಬೇಡದ ಚಟಗಳನ್ನು ಅಂಟಿಸಿಕೊಂಡಿರುವ ಉದಾಹರಣೆಗಳಿವೆ. ಹೇರಿಕೆ ಶಿಕ್ಷಣದ ವಿಷಯದಲ್ಲಾಗಬಹುದು ಅಥವಾ ಅವರ ಪಠ್ಯೇತರ ಕಲಿಕೆಯ ವಿಷಯಕ್ಕಾಗಿರಬಹುದು. ಯಾವುದೂ ಅತಿಯಾಗಬಾರದು. ಅತಿಯಾದರೆ ಅಮೃತವೂ ವಿಷ.

ಹಾಗಿದ್ದರೆ ಟೈಂ ಟೇಬಲ್ ನಿರ್ದೇಶಿತವಾಗಿ ಮಕ್ಕಳನ್ನು ಬೆಳೆಸುವುದು ತಪ್ಪಾ? ಚೌಕಟ್ಟು ಇಲ್ಲದೆ ಹೋದರೆ ಅವರ ಸಮಯ ವ್ಯರ್ಥವಾಗುತ್ತದೆ. ಅವರ ನಿಜವಾದ ಆಸಕ್ತಿ ಗುರುತಿಸುವುದು ಹೇಗೆ? ಸಂಗೀತ, ನೃತ್ಯಗಳಂಥ ವಿಶೇಷ ತರಗತಿಗಳಿಗೆ ಚಿಕ್ಕವಯಸ್ಸಿನಲ್ಲಿ ಸೇರಿಸಬಾರದಾ? ಅವು ಒತ್ತಡ ನೀಡುತ್ತವೆಯಾ? ಒತ್ತಡವಾಗದಂತೆ ನೋಡಿಕೊಳ್ಳುವುದು ಹೇಗೆ? ಎಂಬೆಲ್ಲಾ ಸಂದೇಹಗಳು ತಾಯಂದಿರನ್ನು ಕಾಡುತ್ತವೆ.

ಆಸಕ್ತಿ ಎನ್ನುವುದು ಇರುವುದೋ ನಾವು ಬೆಳೆಸುವುದೋ ಎಂಬ ವಿಷಯಕ್ಕೆ ಒಬ್ಬೊಬ್ಬರದು ಒಂದೊಂದು ಅಭಿಪ್ರಾಯ. ಆಸಕ್ತಿಯನ್ನು ಗುರುತಿಸಿದ ಮೇಲೆಯೇ ಮಕ್ಕಳನ್ನು ತರಗತಿಗೆ ಸೇರಿಸಬೇಕು ಎನ್ನುವುದು ಹಲವರ ಅಭಿಪ್ರಾಯವಾದರೆ, ಅನುಭವ ಸಿಗದೆ ಆಸಕ್ತಿ ಅರಿಯುವುದು ಹೇಗೆ ಎನ್ನುವುದು ಹಲವರ ಮುಂದಿರುವ ಪ್ರಶ್ನೆ.

## ಅಡುಗೆ ಮಾಡಿದರೆ ರುಚಿ ತಿಳಿಯೋದು

'ಚಿಕ್ಕ ವಯಸ್ಸಿನಲ್ಲಿ ಕಲಿಕೆ ಸುಲಭ. ಅವರಲ್ಲಿ ಗ್ರಹಿಸುವ ಶಕ್ತಿ ಅತಿಯಾಗಿರುತ್ತದೆ. ಹೀಗಾಗಿ ಹೇಳಿಕೊಟ್ಟಿದ್ದನ್ನು ಬೇಗನೆ ಕಲಿಯುತ್ತಾರೆ' ಎನ್ನುತ್ತಾರೆ ಬೆಂಗಳೂರಿನ ಸೌಂದರ್ಯ ಅಕ್ವಾಟಿಕ್ ಸೆಂಟರ್‌ನ ಮುಖ್ಯ ಕೋಚ್ ವಿಜಯ್ ನೀಲಕಂಠಯ್ಯ. ಅದರಲ್ಲಿಯೂ ಅವರು, ಎಲ್ಲ ಮಕ್ಕಳೂ ಈಜು ಕಲಿಯಲೇಬೇಕು ಎಂದು ಒತ್ತಿಹೇಳುತ್ತಾರೆ. ಚಟುವಟಿಕೆಯಲ್ಲಿ ತೊಡಗಿಕೊಂಡ ಮೇಲೆ ಮಕ್ಕಳಲ್ಲಿ ತಂತಾನೆಯೇ ಆಸಕ್ತಿ ಹುಟ್ಟಿಕೊಳ್ಳುತ್ತದೆ ಎನ್ನುವುದು ಅವರ ಅಭಿಮತ.

'ಈಜುಗಾರಿಕೆ ಬದುಕಿಗೇ ಬೇಕಾದ ಕೌಶಲ. ಆರನೇ ತಿಂಗಳಿಂದ ಮಕ್ಕಳಿಗೆ ಈಜುಗಾರಿಕೆ